690(884) : ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರಿನಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ನಾಗರೀಕರು ತುಂಬಾ ತೊಂದರೆಗೀಡಾಗಿದ್ದು, ಒಳಚರಂಡಿ ವ್ಯವಸ್ಥೆ ಮಾಡಿಸಲು ಈ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ನಿಗಧಿಪಡಿಸಲಾಗಿದೆಯೇ;

ಆ) ನಿಗಧಿಪಡಿಸಿದ್ದಲ್ಲಿ, ಈ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸೇರಿಸಿ ಕಾರ್ಯರೂಪಕ್ಕೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಗೌರಿಬಿದನೂರು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕಾದಲ್ಲಿ ಸಿಪಿಹೆಚ್‌ಇಇ ಯ ನಿಯಮಾವಳಿ ಪ್ರಕಾರ ನೀರು ಸರಬರಾಜಿನ ಪ್ರಮಾಣ ತಲಾ ದಿನಂಪ್ರತಿ ಕನಿಷ್ಟ 100 ಲೀಟರ್ ಇರಬೇಕಾಗಿರುತ್ತದೆ. ಪಟ್ಟಣದ ಹಾಲಿ ನೀರು ಸರಬರಾಜಿನ ಪ್ರಮಾಣವು ದಿನಂಪ್ರತಿ ತಲಾ 40 ಲೀಟರ್ ಗಳಾಗಿದ್ದು ಪಟ್ಟಣದ ನೀರು ಸರಬರಾಜು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಿಂಡಿ ಅಣೆಕಟ್ಟಿನ ಹಿನ್ನೀರನ್ನು ಬಳಸಿಕೊಂಡು ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವ ರೂ. 400.05 ಲಕ್ಷಗಳ ಯೋಜನೆಯನ್ನು ತಯಾರಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಯೋಜನೆ ಪೂರ್ಣಗೊಂಡು ಅಗತ್ಯ ಪ್ರಮಾಣದ ಸಮರ್ಪಕ ನೀರು ಸರಬರಾಜು ವ್ಯವಸ್ಥೆಯಾದ ನಂತರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಯೋಜನೆಯನ್ನು ರೂಪಿಸಲಾಗುವುದು.

691(798) : ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ವಿದ್ಯಾವಂತ ಯುವಕರಿಗೆ ಸ್ವ-ಉದ್ಯೋಗದಡಿಯಲ್ಲಿ ಸಣ್ಣ ಕೈಗಾರಿಕಾ ಪ್ರಾರಂಭಕ್ಕೆ ಸರ್ಕಾರವು ಪ್ರೋತ್ಸಾಹ ನೀಡುತ್ತಿದೆಯೇ;

ಆ) ಸಾಮಾನ್ಯ ವಿದ್ಯಾವಂತರಿಗೆ ಸಣ್ಣ ಕೈಗಾರಿಕೆಗಳನ್ನು ತೆರೆಯಲು ಸರ್ಕಾರವು ನೀಡುತ್ತಿರುವ ಪ್ರೋತ್ಸಾಹ ಯಾವುದಕ್ಕೂ ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ ಪ್ರೋತ್ಸಾಹ ಧನ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು)

ಅ) ವಿದ್ಯಾವಂತ ಯುವಕರಿಗೆ ಸ್ವಯಂ ಉದ್ಯೋಗ ಕಾರ್ಯಕ್ರಮವಾದ ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಗ್ರಾಮಾಂತರ ವಿದ್ಯಾವಂತ ಯುವಕರಿಗೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹ ನೀಡುತ್ತಿದೆ.

ಆ) ಇದು ಸಾಲದೇ ಇರುವ ಬಗ್ಗೆ ಇದುವರೆವಿಗೂ ಯಾವುದೇ ಪ್ರಸ್ತಾವನೆಯು ಇಲಾಖೆಗೆ ಬಂದಿರುವುದಿಲ್ಲ. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದ್ದು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಟಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮಂಜೂರಾದ ಫಲಾನುಭವಿ ಯೋಜನಾ ವೆಚ್ಚದ ಮೇಲೆ ಶೇ. 15ರಷ್ಟು ಗರಿಷ್ಠ ರೂ. 7,500–00 ಗಳನ್ನು ಸಹಾಯಧನ ನೀಡಲಾಗುತ್ತಿದೆ. ಅದಲ್ಲದೆ, ರಾಜ್ಯ ಸರ್ಕಾರದ ನೂತನ ಕೈಗಾರಿಕಾ ನೀತಿ 2001–06 ರಂತೆ ಸಣ್ಣ ಕೈಗಾರಿಕೆಗಳು ಹೆಚ್ಚುವರಿ ಬಂಡವಾಳ ಸಹಾಯಧನಕ್ಕೆ ಅರ್ಹವಿದ್ದಲ್ಲಿ ಪರಿಗಣಿಸಲಾಗುವುದು. ಆದ್ಯತೆ ಮೇಲೆ ಕೈಗಾರಿಕಾ ಶೆಡ್ ವಿದ್ಯುಚ್ಛಕ್ತಿ ಇತ್ಯಾದಿ ಹಂಚಿಕೆ ಕೋರಿಕೆಗಳನ್ನು ಪರಿಗಣಿಸಲಾಗುವುದು.

ಇ) ಮೇಲೆ ವಿವರಿಸಿದ ಸಂದರ್ಭದಲ್ಲಿ, ಸಬ್ಸಿಡಿ ಅಥವಾ ಇನ್ನಾವುದೇ ರೀತಿಯ ಪ್ರೋತ್ಸಾಹಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

692(580) : ಶ್ರೀ ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ನಗರದಲ್ಲಿ ಸುಮಾರು 75 ಸಾವಿರ ಜನಸಂಖ್ಯೆ ಇದ್ದು ಮತ್ತು ಇದು ವಾಣಿಜ್ಯ ಕೇಂದ್ರವಾಗಿರುವುದರಿಂದ ಜನ ಸಂಪರ್ಕ ಕೂಡ ಜಾಸ್ತಿ ಇದ್ದು ಇಲ್ಲಿ ಕುಡಿಯುವ ನೀರು ಜನಸಂಖ್ಯೆಗೆ ಅನುಗುಣವಾಗಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ನಗರದಲ್ಲಿ ಅನೇಕ ಕೊಳವೆ ಬಾವಿಗಳು ಬತ್ತಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಏನಾದರೂ ಯೋಜನೆಗಳನ್ನು ಸಿದ್ಧಪಡಿಸಿದೆಯೇ; ಹಾಗೂ ಈ ಬಗ್ಗೆ ಕೈಗೊಳ್ಳುವ ಕ್ರಮಗಳಾವುವು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬಂದಿದೆ

ಆ) ಬಂದಿದೆ.

ಇ) ಹಾಲಿ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ರೂ. 43.20 ಲಕ್ಷಗಳ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ. ಅಲ್ಲದೇ ಕೊಳವೆ ಬಾವಿಗಳ ಮೂಲದಿಂದ ನೀರನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಚಿಂತಾಮಣಿ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚು ಅಂತರ್ಜಲ ದೊರೆಯಬಹುದಾದ ಸ್ಥಳವನ್ನು ಗುರುತಿಸಿಕೊಡಲು ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ತಂತ್ರಜ್ಞಾನ ಬಳಕೆ ಕೇಂದ್ರವನ್ನು ಸಂಪರ್ಕಿಸಲಾಗಿದ್ದು ಇವರು ನೀಡುವ ಸಲಹೆ ಆಧರಿಸಿ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗುವುದು.